ಓ ಎಸ್ ನಂಃ 1/2023
ಪಿ. ಡಬ್ಲ್ಯೂ-3

**(ಇಂದು ದಿನಾಂಕ 27-01-2026 ರಂದು ಮಧ್ಯಂತರ ಅರ್ಜಿ ನಂಃ 18 ಮತ್ತು 19 ರ ಆದೇಶದನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿ ನಂಃ 3 ರವರ ಪರ ಶ್ರೀ ಪಿ ಡಿ ಕೆ ವಕೀಲರಿಂದ**

ನಾನು ದಾವಾ ಸ್ವತ್ತುಗಳ ಉತಾರಗಳನ್ನು ನೋಡಿದ್ದೇನೆ . ಉತಾರಿನಲ್ಲಿ ಕಮಲಮ್ಮಾ ಇವರ ಹೆಸರು ಮಾತ್ರ ನಮೂದು ಇತ್ತು . ಕಮಲಮ್ಮಾ ಮತ್ತು ಅವರ ಮಕ್ಕಳು ಸಂಜೆ 4.00 ಗಂಟೆ ಸಮಯಕ್ಕೆ ಬಂದಿದ್ದರು . ಕಮಲಮ್ಮಾ ಇವರ ಮಕ್ಕಳ ಹೆಸರು ವನಿತಾ ಬಾಳಗಿ , ಮಲ್ಲಿಕಾರ್ಜುನ ಸಿದ್ದಪ್ಪ ಬಾಳಗಿ , ಚಂದ್ರಮ್ಮ ಸಾಲಿ ಬಂದಿದ್ದರು . ಅವರ ಜೊತೆ ಪ್ರಕಾಶ ಮುತಗಿ ಎನ್ನುವವರು ಬಂದಿದ್ದರು . ಇವರೆಲ್ಲರೂ ನಮ್ಮ ಮನೆಗೆ ಬಂದಿದ್ದರು . ಅವರಿಂದ ಮಾಹಿತಿ ತೆಗೆದು 2-3 ದಿನಗಳ ನಂತರ ಮೃತ್ಯು ಪತ್ರ ತಯಾರಿಸಿದೆನು . ಸದರಿಯವರಿಗೆ ನೀಡಿದ ಮಾಹಿತಿಯ ಕರಡನ್ನು ತಯಾರಿಸಿದೆನು . ಕರಡು ಪ್ರತಿಯ ಮೇಲೆ ಕಮಲಮ್ಮಾ ಇವರ ಸಹಿ ಪಡೆಯಲಿಲ್ಲ . ಮೃತ್ಯು ಪತ್ರವನ್ನು ದಿಃ 21-01-2019 ಕ್ಕೆ ನನ್ನ ಕಚೇರಿಯಲ್ಲಿ ಸಿದ್ದ ಮಾಡಿಕೊಂಡೆನು . ನಂತರ ದಿಃ 31-01-2019 ರಂದು ಇವರೆಲ್ಲರ ಸಹಿಯನ್ನು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಪಡೆದೆನು . ದಿಃ 31-01-2019 ರಂದು ಸದರಿಯವರ ಸಹಿಯನ್ನು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಪಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಕಮಲಮ್ಮಾ ಇವರು ನನಗೆ ವೈಯಕ್ತಿಕವಾಗಿ ಪರಿಚಯ ಇಲ್ಲ . ಕಮಲಮ್ಮಾ ಇವರ ಮಕ್ಕಳು ನನಗೆ ಪರಿಚಯ ಇಲ್ಲ . ಕಮಲಮ್ಮಾ ಇವರು ತನ್ನ ಮಕ್ಕಳು ಎಂದು ಹೇಳಿದರು ಎಂದು ಸಾಕ್ಷಿಯು ಹೇಳುತ್ತಾರೆ . ಕಮಲಮ್ಮಾ ಇವರು ನಿಪಿ-1 ನ್ನು ತಯಾರಿಸಲು ನನಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ . ಕಮಲಮ್ಮಾ ಹೇಳಿದ ಪ್ರಕಾರ

ಓ ಎಸ್ ನಂಃ 1/2023
ಪಿ. ಡಬ್ಲ್ಯೂ-3

ಮೃತ್ಯು ಪತ್ರದ ಕರಡು ಪ್ರತಿ ತಯಾರಿಸಿದ 10 ದಿನಗಳ ನಂತರ ನೊಂದಣಿ ಮಾಡಿಸಿದ್ದೇನೆ . ಆ ಅವಧಿಯಲ್ಲಿ ಮೃತ್ಯು ಪತ್ರದ ಕರಡು ಪ್ರತಿ ನನ್ನ ನನ್ನಲ್ಲೇ ಇತ್ತು ಎಂದರೆ ಸರಿ .

ಕಮಲಮ್ಮಾ ಇವರ ಮಾನಸಿಕ ಆರೋಗ್ಯದ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡಲಿಲ್ಲ . ನೊಂದಣಿ ಮಾಡಿಸಲು ಮಃ 12.30 - 1.00 ಗಂಟೆ ಸಮಯಕ್ಕೆ ರಿಕ್ಷಾದಲ್ಲಿ ಹೋದೆವು . ಕಮಲಮ್ಮಾ ಇವರು ನ್ಯಾಯಾಲಯದ ಆವರಣಕ್ಕೆ ಬಂದಿದ್ದು ಅಲ್ಲಿಂದ ಉಪನೊಂದಣಾಧಿಕಾರಿಗಳ ಕಚೇರಿಗೆ ಹೋದೆವು . ನೊಂದಣಿ ಮಾಡಿಸುವ ಕಾಲಕ್ಕೆ ನಿಪಿ-1 ರ ಒಳಸಂಗತಿಗಳನ್ನು ನಾನು ಪುನಃ ಓದಿ ಹೇಳಿದ್ದೇನೆ . ನಿಪಿ-1 ರ ಒಳಸಂಗತಿಗಳನ್ನು ನಾನು ಪುನಃ ಓದಿ ಹೇಳಿದ್ದೇನೆ ಎಂದು ನಿಪಿ-1 ರಲ್ಲಿ ಷರಾ ಬರೆದಿಲ್ಲ . ಸಾಕ್ಷಿದಾರ ವಿಶಾಲ ಹುಡೆದ ಇವರು ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿದ್ದು ತನ್ನ ಕೆಲಸದ ನಿಮಿತ್ತ ಯಾವಾಗಲೂ ನ್ಯಾಯಾಲಯದ ಆವರಣದಲ್ಲಿ ಇರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ . ಸಾಕ್ಷಿದಾರ ವಿಶಾಲ ಹುಡೆದ ಇವರು ನನ್ನ ಕಡೆ ಬಂದು ಪ್ರಮಾಣ ಪತ್ರ ವಗೈರೆ ದಾಖಲೆಗಳನ್ನು ತಯಾರಿಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿದಾರ ವಿಶಾಲ ಹುಡೆದ ಮತ್ತು ಅವರ ಗೆಳೆಯ ಪ್ರಕಾಶ ಇವರ ಮಾತು ಕೇಳಿ ನಿಪಿ-1 ನ್ನು ಸೃಷ್ಟಿಸಿ ಆ ಪ್ರಕಾರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ೦ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.